Azadi Ka Amrit Mahotsav

**ಕರ್ನಾಟಕಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 560001**

ಸಂಖ್ಯೆ: ಇ–ಆಡಳಿತ ಶಿ.ವ.ಕೋಶ.ಸಾ.ವ/01/2022-23 ದಿನಾಂಕ:09/12/2022

**: ಪ್ರಾಥಮಿಕ ಮುಖ್ಯ ಶಿಕ್ಷಕರ, ಪ್ರಾಥಮಿಕ ಮತ್ತು ಪ್ರೌಢಶಾಲಾ ಹೆಚ್ಚುವರಿ ಶಿಕ್ಷಕರ, ಸಮರ್ಪಕ ಮರುಹೊಂದಾಣಿಕೆ (Rationalization) ಪ್ರಕ್ರಿಯೆಯ ಮಾರ್ಗಸೂಚಿ-ವೇಳಾಪಟ್ಟಿ :**

**ವಿಷಯ:** 2022-23ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು ಒಳಗೊಂಡಂತೆ ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು ಪ್ರೌಢ ಶಾಲಾ ಶಿಕ್ಷಕರು/ತತ್ಸಮಾನ ವೃಂದದ ಹೆಚ್ಚುವರಿ ಶಿಕ್ಷಕರನ್ನು ಆದ್ಯತೆಯ ಮೇಲೆ ಗುರುತಿಸುವ ಬಗ್ಗೆ:

**ಉಲ್ಲೇಖ:**
1. ಪ್ರಾಥಮಿಕ ಶಾಲಾ ಶಿಕ್ಷಕ ಸಂಪನ್ಮೂಲದ ಸಮರ್ಪಕ ಮರುಹಂಚಿಕೆ ಕುರಿತಾದ ಆದೇಶ ಸಿ3(7)ಪ್ರಶಾಶಿ ವರ್ಗಾವಣೆ/ಹೆಚ್ಚುವರಿ-01/2021-22 ದಿನಾಂಕ: 24/08/2022.
2. ಪ್ರೌಢಶಾಲಾ ಶಿಕ್ಷಕ ಸಂಪನ್ಮೂಲದ ಸಮರ್ಪಕ ಮರುಹಂಚಿಕೆ ಕುರಿತಾದ ಆದೇಶ: ಸಿ4(1) ಸ.ಪ್ರೌ.ಶಾ.ಹೆ.ಶಿ 47/2021-22 ದಿನಾಂಕ: 22/08/2022
3. ಇ.ಇ.ಡಿ.ಎಸ್ ಸುತ್ತೋಲೆ: ಇ-ಆಡಳಿತ/ಶಿಕ್ಷಕರ ಮಿತ್ರ/2020-21 ದಿನಾಂಕ: 25/08/2022 .
4. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 8 ಇಟಿಆರ್ 2020 ದಿನಾಂಕ: 22/07/2020
5. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು ಶಿಕ್ಷಕರ ವರ್ಗಾವಣಾ ಕಾಯ್ದೆ-2020. ಸಂಖ್ಯೆ: ಸಂವ್ಯಾಶಾಇ 12 ಶಾಸನ 2020 ದಿನಾಂಕ: 27/03/2020
6. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು ಶಿಕ್ಷಕರ ವರ್ಗಾವಣಾ ತಿದ್ದುಪಡಿ ಕಾಯ್ದೆ-2022. ಸಂಖ್ಯೆ: ಸಂವ್ಯಾಶಾ ಇ 23 ಶಾಸನ 2022 ದಿನಾಂಕ: 13/10/2022.

*********

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ-1 ಮತ್ತು 2 ರಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿವಿಧ ಬೋಧಕ ವೃಂದದ ಹುದ್ದೆಗಳನ್ನು ಶಾಲಾವಾರು ಮರುಹಂಚಿಕೆ ಮಾಡಲಾಗಿದೆ ಹಾಗೂ ಉಲ್ಲೇಖ-3 ರಲ್ಲಿ ಸದರಿ ಶಾಲೆಗಳಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರುಗಳನ್ನು ಮಂಜೂರಾದ ಹುದ್ದೆಗಳಿಗೆ ಎದುರಾಗಿ ಮ್ಯಾಪಿಂಗ್ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಮೇಲಿನ ಮಾಹಿತಿಯು ಶಾಲಾವಾರು/ವಿಷಯವಾರು/ವೃಂದವಾರು ಹುದ್ದೆಗಳ ವಿವರಗಳನ್ನು ಆಯಾ ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ಉಪನಿರ್ದೇಶಕರುಗಳ ಲಾಗಿನ್‌ನಲ್ಲಿ ಲಭ್ಯಪಡಿಸಲಾಗಿದೆ.

ಶಾಲೆಯಲ್ಲಿ ಮಂಜೂರಾದ ಹುದ್ದೆಗಳಿಗಿಂತ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆಯು ಹೆಚ್ಚಾಗಿದ್ದಲ್ಲಿ ಮತ್ತುಹುದ್ದೆ ಮಂಜೂರಾಗದೆ ಕಾರ್ಯನಿರ್ವಹಿಸುತ್ತಿರುವ ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿ ಸ್ಥಳಾಂತರಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು [ಶಿಕ್ಷಕರ ವರ್ಗಾವಣೆ ನಿಯಂತ್ರಣ] ಅಧಿನಿಯಮ,2020 [2020ರ ಕರ್ನಾಟಕ ಅಧಿನಿಯಮ ಸಂಖ್ಯೆ:04] ಹಾಗೂ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು [ಶಿಕ್ಷಕರ ವರ್ಗಾವಣೆ ನಿಯಂತ್ರಣ] ನಿಯಮಗಳು-2020ರ ನಿಯಮ-10(1)ರಿಂದ(7)ರಡಿಯಲ್ಲಿ ಹೆಚ್ಚುವರಿಯಾಗುವ ಯಾವ ಶಿಕ್ಷಕರಿಗೆ ವಿನಾಯಿತಿ ನೀಡಬೇಕು ಮತ್ತು ಯಾವ ಶಿಕ್ಷಕರನ್ನು ಹೆಚ್ಚುವರಿ ಎಂದು ಗುರುತಿಸಿ ಸ್ಥಳಾಂತರಿಸಬೇಕು ಎಂದುದನ್ನು ಶಿಕ್ಷಕರ ವರ್ಗಾವಣಾ ನಿಯಮ-2020ರ ನಿಯಮ 11 ಮತ್ತು 12ರಲ್ಲಿ ಸ್ಪಷ್ಟಪಡಿಸಿದೆ. ಅದರಂತೆ ಸದರಿ ಪ್ರಕ್ರಿಯೆಗೆ ಅರ್ಹ ಶಿಕ್ಷಕರನ್ನು ಗುರುತಿಸಲು ಮೇಲಿನ ನಿಯಮಗಳಂತೆ ಅರ್ಹ ಶಿಕ್ಷಕರಿಗೆ ವಿನಾಯಿತಿ ನೀಡಲು ಅವಕಾಶ ಕಲ್ಪಿಸಬೇಕಾಗಿದೆ.

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು ಶಿಕ್ಷಕರ ವರ್ಗಾವಣಾ ಅಧಿನಿಯಮ-2020ರ ಸೆಕ್ಷನ್ 10(1)ರಡಿಯಲ್ಲಿ ಈ ಕೆಳಕಂಡ ಪ್ರಕರಣಗಳಿಗೆ ಸಕ್ಷಮ ಪ್ರಾಧಿಕಾರದಿಂದ ದೃಢೀಕೃತ ಪ್ರಮಾಣ ಪತ್ರ ಸಲ್ಲಿಸಿದಲ್ಲಿ ಮಾತ್ರ ಅರ್ಹತೆಯಿದ್ದಲ್ಲಿ ಹೆಚ್ಚುವರಿ ಸ್ಥಳಾಂತರ ಪ್ರಕ್ರಿಯೆಯಿಂದ ವಿನಾಯಿತಿ ನೀಡಲಾಗಿದೆ.

1. ಶಿಕ್ಷಕರ ಅಥವಾ ಆತನ ಪತ್ನಿ ಅಥವಾ ಮಕ್ಕಳು, ಶಿಕ್ಷಕನು ಕರ್ತವ್ಯ ನಿರ್ವಹಿಸುತ್ತಿರುವ ತಾಲ್ಲೂಕಿನೊಳಗಡೆ ಚಿಕಿತ್ಸೆಯು ಲಭ್ಯವಿಲ್ಲದ ಕೊನೆಯ ಹಂತದ ಖಾಯಿಲೆ ಅಥವಾ ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದಲ್ಲಿ.
2. ಶೇ 40 ಕ್ಕಿಂತ ಹೆಚ್ಚಿನ ಅಂಗವೈಕಲ್ಯತೆಯುಳ್ಳ ಶಿಕ್ಷಕರ ಅಥವಾ ಆತನ ಪತ್ನಿ ಅಥವಾ ಆತನ ಮಕ್ಕಳು.

3. 12 ವರ್ಷ ಒಳಗಿನ ಅವಲಂಬಿತ ಮಕ್ಕಳನ್ನು ಹೊಂದಿರುವ ವಿದವೆ ಅಥವಾ ವಿಧುರ ಅಥವಾ ವಿಚೇದಿತ ಶಿಕ್ಷಕ.
4. ಭಾರತೀಯ ರಕ್ಷಣಾದಳಗಳು ಅಥವ ಅರೆ ಮಿಲಿಟರಿ ದಳಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸೈನಿಕ ಅಥವಾ ನಿವೃತ್ತಿಹೊಂದಿದ ಅಥವಾ ಶಾಶ್ವತವಾಗಿ ಅಂಗವಿಕಲನಾದ ಅಥವಾ ಮೃತ ಸೈನಿಕನ ಪತಿ ಅಥವಾ ಪತ್ನಿಯಾಗಿರುವ ಶಿಕ್ಷಕ.
5. ಮಹಿಳಾ ಶಿಕ್ಷಕರ ಸಂದರ್ಭದಲ್ಲಿ 50 ವರ್ಷಗಳು ಮತ್ತು ಪುರುಷರಾಗಿದ್ದಲ್ಲಿ 55 ವರ್ಷ ವಯೋಮಾನ ಮೀರಿದ ಶಿಕ್ಷಕ.
6. ಗರ್ಭಿಣಿ ಶಿಕ್ಷಕಿ ಅಥವಾ ಒಂದು ವರ್ಷದೊಳಗಿನ ಮಗುವನ್ನು ಹೊಂದಿರುವ ಮಹಿಳಾ ಶಿಕ್ಷಕಿ.
   ಮೇಲಿನ ವಿನಾಯಿತಿಯನ್ನು ಕ್ಲೇಮು ಮಾಡಲು ಸೇವಾವಧಿಯಲ್ಲಿ ಒಂದುಬಾರಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಈ ಹಿಂದೆ ಇದೇ ಪ್ರಕರಣದಲ್ಲಿ ವಿನಾಯಿತಿ ಪಡೆದಿದ್ದಲ್ಲಿ ವಿನಾಯಿತಿಗೆ ಅರ್ಹರಾಗಿರುವುದಿಲ್ಲ.

ಮೇಲೆ ವಿವರಿಸಲಾಗಿರುವ ವಿನಾಯಿತಿಗಳನ್ನು ಕ್ಲೇಮ್ ಮಾಡಲು ಶಿಕ್ಷಕರ ವರ್ಗಾವಣಾ ನಿಯಮ-2020ರ ನಿಯಮ 10(2) ರಲ್ಲಿ ವಿನಾಯಿತಿ ಅಥವಾ ಆದ್ಯತೆಯನ್ನು ಕ್ಲೇಮ್ ಮಾಡಲು ಸಲ್ಲಿಸಬೇಕಾದ ಪ್ರಮಾಣ ಪತ್ರ/ದಾಖಲೆಗಳನ್ನು ವಿತರಿಸುವ ಸಕ್ಷಮ ಪ್ರಾಧಿಕಾರದ ವಿವರಗಳನ್ನು ಪಟ್ಟಿಯಲ್ಲಿ ವಿವರಿಸಲಾಗಿದೆ.

| ಕ್ರಸಂ | ವಿನಾಯಿತಿ ಅಥವಾ ಆದ್ಯತೆ ಕ್ಲೇಮ್ | ಪೂರಕ ದಾಖಲೆಗಳು |
|---|---|---|
| 1 | ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಅನುದಾನಿತ ಸಂಸ್ಥೆಗಳ ನೌಕರನನ್ನು ವಿವಾಹವಾಗಿರುವ ಶಿಕ್ಷಕ | ಸಂಗಾತಿಯ ನೇಮಕಾತಿ ಪ್ರಾಧಿಕಾರದಿಂದ ಪ್ರಮಾಣಪತ್ರ |
| 2 | ತಾಲ್ಲೂಕಿನೊಳಗೆ ಚಿಕಿತ್ಸೆ ಸಿಗದಿರುವ ಮಾರಕ ಕಾಯಿಲೆ ಅಥವಾ ಗಂಭೀರ ಕಾಯಿಲೆಯಿಂದ ಬಳಲುತ್ತಿರುವ ಶಿಕ್ಷಕರ ಅಥವಾ ಪತಿ/ಪತ್ನಿ ಅಥವಾ ಮಕ್ಕಳು ಶೇಕಡಾ 40ರಷ್ಟು ಅಥವಾ ಅದಕ್ಕಿಂತ ಹೆಚ್ಚು ಅಂಗವೈಕಲ್ಯವಿರುವ ಶಿಕ್ಷಕರ ಅಥವಾ ಪತಿ/ಪತ್ನಿ ಅಥವಾ ಮಕ್ಕಳು | ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪ್ರಮಾಣಪತ್ರ |
| 3 | ಗರ್ಭಿಣಿ ಶಿಕ್ಷಕಿ ಅಥವಾ ಒಂದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗುವನ್ನು ಹೊಂದಿರುವ ಮಹಿಳಾ ಶಿಕ್ಷಕಿ. | ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪ್ರಮಾಣಪತ್ರ |
| 4 | ಅವಲಂಬಿತ ಮಕ್ಕಳೊಂದಿಗೆ ಇರುವ ವಿಧನೆ ಅಥವಾ ವಿಧುರ ಶಿಕ್ಷಕ | ಸಂಗಾತಿಯ ಮರಣ ಪ್ರಮಾಣ ಪತ್ರ ಮತ್ತು ಮರು ವಿವಾಹ ಮಾಡಿಕೊಳ್ಳದಿರುವ ಬಗ್ಗೆ ಮ್ಯಾಜಿಸ್ಟ್ರೇಟ್ ಅಫಿಡವಿಟ್ |
| 5 | ಭಾರತೀಯ ರಕ್ಷಣಾ ಪಡೆಗಳ ಅಥವಾ ಅರೆಸೇನಾ ಪಡೆಗಳ ಹಾಲಿ ಅಥವಾ ಮಾಜಿ ಸೈನಿಕ ಅಥವಾ ಶಾಶ್ವತವಾಗಿ ಅಂಗವಿಕಲನಾದ ಅಥವಾ ಮೃತ ಸೈನಿಕನ ಪತ್ನಿ ಅಥವಾ ಸಂದರ್ಭಾನುಸಾರ ಸಂಗಾತಿ | ಕಮಾಂಡಿಂಗ್ ಆಫೀಸರ್ ಅಥವಾ ನಿರ್ದೇಶಕರು, ಸೈನಿಕ ಕಲ್ಯಾಣ ಮಂಡಳಿಯಿಂದ ಪ್ರಮಾಣ ಪತ್ರ |
| 6 | ಅವಲಂಬಿತ ಮಕ್ಕಳೊಂದಿಗೆ ಇರುವ ವಿವಾಹ ವಿಚ್ಛೇದಿತ ಶಿಕ್ಷಕ/ಶಿಕ್ಷಕಿ | ನ್ಯಾಯಾಲಯದ ಡಿಕ್ರಿ ಮತ್ತು ಅವಲಂಬಿತ ಮಗು ಬಗ್ಗೆ ಮ್ಯಾಜಿಸ್ಟ್ರೇಟ್ ಅಫಿಡವಿಟ್ ಮತ್ತು ಮರುವಿವಾಹವಾಗದೇ ಇರುವುದು. ಮುಸ್ಲಿಂಮರಾಗಿದ್ದಲ್ಲಿ ಮಸೀದಿ ಸಮಿತಿಯಿಂದ ನೀಡಲಾದ ಖುಲನಾಮ, ತಲಾಖ್-ನಾಮ ಅಥವಾ ತಲಾಕ್-ಇ-ಮುಬಾರತ್ ಮತ್ತು ಅವಲಂಬಿತ ಮಗು ಬಗ್ಗೆ ಮ್ಯಾಜಿಸ್ಟ್ರೇಟ್ ಅಫಿಡವಿಟ್ ಹಾಗೂ ಮರುವಿವಾಹವಾಗದೇ ಇರುವುದು |
| 7 | ಐವತ್ತು ವರ್ಷಗಳ ವಯೋಮಾನದ ಮಹಿಳಾ ಶಿಕ್ಷಕಿಯರು ಅಥವಾ ಐವತ್ತೈದು ವರ್ಷಗಳ ವಯೋಮಾನದ ಪುರುಷ ಶಿಕ್ಷಕರು | ಸೇವಾ ರಿಜಿಸ್ಟರ್ ಪ್ರಕಾರ ಡಿಡಿಒ ರವರಿಂದ ನೀಡಲಾದ ಪ್ರಮಾಣ ಪತ್ರ. |

ಮೇಲೆ ವಿವರಿಸಲಾದ ಆದ್ಯತೆಗಳಿಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರಗಳನ್ನು ಮಾತ್ರ ವಿನಾಯಿತಿ ಕ್ಲೇಮ್ ಮಾಡಲು ಪರಿಗಣಿಸಲಾಗುವುದು. ಪಟ್ಟಿ ಅಂತಿಮಗೊಂಡ ನಂತರ ಕೌನ್ಸಿಲಿಂಗ್‌ನಲ್ಲಿ ಆದ್ಯತೆ ಕ್ಲೇಂ ಮಾಡಲು ಅವಕಾಶ ನೀಡಲಾಗುವುದಿಲ್ಲ.

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು ಶಿಕ್ಷಕರ ವರ್ಗಾವಣಾ ನಿಯಂತ್ರಣ ನಿಯಮ-2020ರ ನಿಯಮ- 11 ರಲ್ಲಿ ಶಿಕ್ಷಕರ ಸಮರ್ಪಕ ಮರುಹಂಚಿಕೆ ವರ್ಗಾವಣೆಯಿಂದ ವಿನಾಯಿತಿಯನ್ನು ಪಡೆಯಲು

ಕನಿಷ್ಠ ಸೇವಾ ಅವಧಿಯನ್ನು ಪೂರ್ಣಗೊಳಿಸಿರುವ ಪ್ರತಿಯೊಬ್ಬ ಶಿಕ್ಷಕನಿಗೆ ವರ್ಗಾವಣೆ ಪ್ರಕ್ರಿಯೆ ನಿಯಂತ್ರಣ ಅಧಿಕಾರಿಯಿಂದ ಅಧಿಸೂಚಿಸಲಾದ ಕಾಲಾವಧಿಯೊಳಗೆ ಕೋರಿಕೆಯ ವರ್ಗಾವಣೆಗೆ ಮತ್ತು/ಅಥವಾ ಸುವ್ಯವಸ್ಥೆಗೊಳಿಸುವಿಕೆ/ವಲಯ ವರ್ಗಾವಣೆಯಿಂದ ವಿನಾಯಿತಿಯನ್ನು ಪಡೆಯಲು ಆನ್‌ಲೈನ್ ಅರ್ಜಿಯನ್ನು ಸಲ್ಲಿಸಲು ಅವಕಾಶವನ್ನು ಒದಗಿಸತಕ್ಕದ್ದು.

1) ಶಿಕ್ಷಕರ ವರ್ಗಾವಣೆಗಾಗಿ ಕೋರಿಕೆಯ ಅರ್ಜಿಯನ್ನು ಸಲ್ಲಿಸುವಾಗ, 10ನೇ ನಿಯಮದ ಮೇರೆಗೆ ಸಂಬಂಧಪಟ್ಟ ದಾಸ್ತಾವೇಜುಗಳೊಂದಿಗೆ ಅಧಿನಿಯಮದ 10ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ವರ್ಗಗಳ ಮೇರೆಗೆ ಆದ್ಯತೆಯನ್ನು ಸಹ ಕೋರಬಹುದು;
2) 10ನೇ ನಿಯಮದಲ್ಲಿ, ನಿರ್ದಿಷ್ಟಪಡಿಸಲಾದ ಸಂಬಂಧಪಟ್ಟ ದಾಖಲೆಗಳೊಂದಿಗೆ ಸಮರ್ಪಕ ಮರು ಹಂಚಿಕೆ/ವಲಯ ವರ್ಗಾವಣೆಯಿಂದ ವಿನಾಯಿತಿ ಪಡೆಯುವ ಅರ್ಜಿಯಿಂದಲೂ ಸಹ ಆನ್‌ಲೈನ್‌ನಲ್ಲಿ ಕ್ಲೇಮ್ ಮಾಡತಕ್ಕದ್ದು;
3) ಆದ್ಯತೆ ಅಥವಾ ವಿನಾಯಿತಿಯನ್ನು ಕಾಲಮಿತಿಯೊಳಗೆ ಕ್ಲೇಮ್ ಮಾಡದಿದ್ದರೆ, ಆಗ ಅದನ್ನು ನಂತರ ಹಂತದಲ್ಲಿ ಪರಿಗಣಿಸತಕ್ಕದ್ದಲ್ಲ; ಮತ್ತು
    1) ಶಿಕ್ಷಕರ ಸಮರ್ಪಕ ಮರುಹಂಚಿಕೆ ಅಥವಾ ವಲಯ ವರ್ಗಾವಣೆಗಳ ಮೇರೆಗೆ ವರ್ಗಾವಣೆಗೆ(ಹೆಚ್ಚುವರಿ ಸ್ಥಳ ನಿಯುಕ್ತಿಗೆ) ಗುರುತಿಸಲಾದ ಶಿಕ್ಷಕರು, ಕೋರಿಕೆಯ ವರ್ಗಾವಣೆಗಾಗಿ ಅರ್ಜಿಯನ್ನು ಸಹ ಸಲ್ಲಿಸಬಹುದು. ಶಿಕ್ಷಕರ ಸಮರ್ಪಕ ಮರುಹಂಚಿಕೆ ಅಥವಾ ವಲಯ ವರ್ಗಾವಣೆಗೆ ಮುಂಚೆ ಅವರು ಕಾರ್ಯ ನಿರ್ವಹಿಸುತ್ತಿರುವ ಶಾಲೆಯ ಆಧಾರದ ಮೇಲೆ ಅವರ ಅರ್ಹತೆ ಮತ್ತು ಕೃಪಾಂಕವನ್ನು ಪರಿಗಣಿಸತಕ್ಕದ್ದು.

ವರ್ಗಾವಣಾ ನಿಯಮ-12 ರಲ್ಲಿ "ವಿನಾಯಿತಿಯನ್ನು ಪಡೆಯುವ ಶಿಕ್ಷಕರ ಪಟ್ಟಿ" ಮತ್ತು ಆದ್ಯತೆಯನ್ನು ನೀಡಿರುವ ಶಿಕ್ಷಕರ ಪಟ್ಟಿಯನ್ನು ಅಂತಿಮಗೊಳಿಸುವುದು:

1.) ಶಿಕ್ಷಕರ ಸಮರ್ಪಕ ಮರುಹಂಚಿಕೆ/ವಲಯ ವರ್ಗಾವಣೆಯ ಮೇರೆಗೆ ವರ್ಗಾವಣೆಗಾಗಿ ಕೋರಿಕೆ ಅರ್ಜಿಯನ್ನು ಮತ್ತು ವಿನಾಯಿತಿಗಾಗಿ ಅರ್ಜಿಯನ್ನು ಸಲ್ಲಿಸುವುದಕ್ಕಾಗಿ ನಿಗದಿಪಡಿಸಲಾದ ಅಂತಿಮ ದಿನಾಂಕದ ನಂತರ, ಸಂಬಂಧಪಟ್ಟ ಕ್ಷೇತ್ರಶಿಕ್ಷಣಾಧಿಕಾರಿ ಆದ್ಯತೆ ಅಥವಾ ವಿನಾಯಿತಿಯ ಪ್ರತಿಯೊಂದು ಅರ್ಜಿಯನ್ನು ಪರಿಶೀಲಿಸತಕ್ಕದ್ದು.
2.) ಕ್ಷೇತ್ರಶಿಕ್ಷಣಾಧಿಕಾರಿ, 10ನೇ ನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಲಾದ ದಾಸ್ತಾವೇಜುಗಳನ್ನು ಸಲ್ಲಿಸುವ ಆಧಾರದ ಮೇಲೆ ಆದ್ಯತೆ ಅಥವಾ ವಿನಾಯಿತಿಯ ಅರ್ಹ ಸಂದರ್ಭಗಳ ತೀರ್ಮಾನಕ್ಕೆ ಬರತಕ್ಕದ್ದು.
3.) ಕ್ಷೇತ್ರಶಿಕ್ಷಣಾಧಿಕಾರಿಯವರಿಗೆ ದಾಖಲೆಗಳ ವಿಶ್ವಾಸಾರ್ಹತೆ (ಸತ್ಯಾಸತ್ಯತೆ) ಅಥವಾ ನೈಜತೆಗೆ ಸಂಬಂಧಿಸಿದಂತೆ ಯಾವುದೇ ಸಂಶಯಗಳು ಉಂಟಾದರೆ ಆತನು ಸಕ್ಷಮ ಪ್ರಾಧಿಕಾರದೊಂದಿಗೆ ಮರುಪರಿಶೀಲನೆ ಮಾಡತಕ್ಕದ್ದು.
4.) ನಂತರ ಕ್ಷೇತ್ರಶಿಕ್ಷಣಾಧಿಕಾರಿಯು ಆನ್‌ಲೈನ್‌ನಲ್ಲಿ ಹಾಗೂ ಕಛೇರಿ ಸೂಚನಾ ಫಲಕದಲ್ಲಿ ಮುಂದಿನವುಗಳನ್ನು ಪ್ರಕಟಿಸತಕ್ಕದ್ದು.
    ಎ) ಕರಡು ಅರ್ಹ ಆದ್ಯತಾ ಪಟ್ಟಿ.
    ಬಿ) ಕಾರಣಗಳೊಂದಿಗೆ ಅನರ್ಹ ಕರಡು ಆದ್ಯತಾ ಪಟ್ಟಿ.
    ಸಿ) ವಿನಾಯಿತಿ ಪಡೇದ ಕರಡು ಅರ್ಹತಾ ಪಟ್ಟಿ.
    ಡಿ) ಕಾರಣಗಳೊಂದಿಗೆ ವಿನಾಯಿತಿ ಪಡೆಯಲು ಅನರ್ಹತಾ ಕರಡು ಪಟ್ಟಿ.
    ಇ) ಯಾವುದೇ ಶಿಕ್ಷಕನಿಂದ ಆಕ್ಷೇಪಣೆಗಳಿಗೆ ಐದು ಕೆಲಸದ ದಿನಗಳನ್ನು ನೀಡುವುದು.
    ಎಫ್) ಕ್ಷೇತ್ರಶಿಕ್ಷಣಾಧಿಕಾರಿ ಅಧಿಸೂಚನೆಯಲ್ಲಿ ಉದ್ಭವಿಸುವ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಿದ ಕೋನೆಯ ದಿನಾಂಕದ ತರುವಾಯ, ಮುಕ್ತವಾಗಿ ಅಹವಾಲು ಸಲ್ಲಿಸಲು ಹಾಗೂ ಆಲಿಸಲು ದಿನಾಂಕವನ್ನು ಸಹ ನಮೂದಿಸುವುದು; ಮತ್ತು
    ಜಿ) ಸ್ಪಷ್ಟವಾದ ಐದು ಕೆಲಸದ ದಿನಗಳ ತರುವಾಯ, ಶಿಕ್ಷಕರ (Weightage score) ಆಧಾರದ ಮೇಲೆ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸತಕ್ಕದ್ದಲ್ಲ.

5) ಅರ್ಹವಾಗಿರುವ ಅಥವಾ ಅನರ್ಹವಾಗಿರುವ ಸಂದರ್ಭಗಳಲ್ಲಾಗಲಿ ಆಕ್ಷೇಪಣೆ ಹೊಂದಿರುವ ಯಾರೇ ಶಿಕ್ಷಕರು ಪೂರಕ ದಾಸ್ತಾವೇಜುಗಳ ಸಹಿತವಾಗಿ ಆನ್‌ಲೈನ್‌ನಲ್ಲಿ ದಾಖಲಿಸಬಹುದು.

6) ಕ್ಷೇತ್ರಶಿಕ್ಷಣಾಧಿಕಾರಿ, ಎಲ್ಲಾ ಆನ್‌ಲೈನ್ ಆಕ್ಷೇಪಣೆಗಳನ್ನು ಪರಿಶೀಲಿಸತಕ್ಕದ್ದು, ಮತ್ತು "ಮುಕ್ತವಾಗಿ ಆಲಿಸುವ ದಿನಾಂಕದಂದು" ಅವರ ಅಹವಾಲುಗಳನ್ನು ಆಲಿಸಿ ಮೌಖಿಕ ಆದೇಶಗಳನ್ನು ಹೊರಡಿಸತಕ್ಕದ್ದು. ಮೌಖಿಕ ಆದೇಶಗಳನ್ನು ವರ್ಗಾವಣೆ ಪೋರ್ಟಲ್ ಮೇಲೆ ಮತ್ತು ಸೂಚನಾ ಫಲಕದ ಮೇಲೆ ಪ್ರಕಟಿಸತಕ್ಕದ್ದು.

7) ಆದೇಶಗಳನ್ನು ಹೊರಡಿಸಿದ ತರುವಾಯ , ಕ್ಷೇತ್ರಶಿಕ್ಷಣಾಧಿಕಾರಿ;

ಎ) ಅಂತಿಮ ಆಧ್ಯತಾ ಪಟ್ಟಿ ಹಾಗೂ

ಬಿ) ಅಂತಿಮ ವಿನಾಯಿತಿ ಪಟ್ಟಿಯನ್ನು ಪ್ರಕಟಿಸತಕ್ಕದ್ದು.

8) ಆದೇಶದಿಂದ ಬಾದಿತನಾದ ಯಾರೇ ಶಿಕ್ಷಕರ ಆದೇಶವನ್ನು ಪ್ರಕಟಿಸಿದ ದಿನಾಂಕದಿಂದ 3 ಕೆಲಸದ ದಿನದೊಳಗೆ ಕುಂದುಕೊರತೆ ನಿವಾರಣಾ ಅಧಿಕಾರಿಯನ್ನು ಸಂಪರ್ಕಿಸತಕ್ಕದ್ದು.

**ಶಿಕ್ಷಕರ ಸಮರ್ಪಕ ಮರುಹಂಚಿಕೆಗೊಳಿಸುವುದರ ಮೇರೆಗೆ ವರ್ಗಾವಣೆಗೆ ಮಾಡಬೇಕಾದ ಶಿಕ್ಷಕರ ಅಂತಿಮ ಪಟ್ಟಿಯನ್ನು ತಯಾರಿಸುವ ಮತ್ತು ಪ್ರಕಟಿಸುವಿಕೆ ಬಗ್ಗೆ ಮತ್ತು ತಾಲ್ಲೂಕಿನೊಳಗೆ ಮತ್ತು ಜಿಲ್ಲೆಯೊಳಗೆ ಶಿಕ್ಷಕರ ಸಮರ್ಪಕ ಮರುಹಂಚಿಕೆಗೊಳಿಸುವಿಕೆಯ ಕ್ರಮಗಳ ಕುರಿತಂತೆ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು ಶಿಕ್ಷಕರ ವರ್ಗಾವಣಾ ನಿಯಂತ್ರಣ ನಿಯಮ-2020ರ ನಿಯಮ 13 ಮತ್ತು 14 ರಲ್ಲಿ ಸವಿಸ್ತಾರವಾಗಿ ವಿವರಿಸಲಾಗಿದೆ. ಸಕ್ಷಮ ಪ್ರಾಧಿಕಾರಿಗಳು ಸದರಿ ನಿಯಮಗಳಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.**

ಈ ಹಿನ್ನೆಲೆಯಲ್ಲಿ ಈ ಕೆಳಕಂಡ ವೇಳಾಪಟ್ಟಿಯಂತೆ ಶಿಕ್ಷಕರುಗಳು ಕ್ಲೇಮ್ ಮಾಡಿರುವ ತಮ್ಮ ವಿನಾಯಿತಿಗಳನ್ನು ಮೂಲ ದಾಖಲೆಗಳ ಸಹಿತ ಇ.ಇ.ಡಿ.ಎಸ್ ತಂತ್ರಾಂಶದಲ್ಲಿ ತಮ್ಮ ಕೆ.ಜಿ.ಐ.ಡಿ ಸಂಖ್ಯೆಯನ್ನು ಬಳಸಿ ಲಾಗಿನ್ ಮೂಲಕ ಸೂಕ್ತ ದಾಖಲೆಗಳನ್ನು ಅಪ್‌ಲೋಡ್ ಮಾಡಿ ವಿನಾಯಿತಿಯನ್ನು ಕ್ಲೇಮ್ ಮಾಡಲು ಅವಕಾಶ ಕಲ್ಪಿಸಲಾಗಿದೆ. ಈ ಬಗ್ಗೆ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು ವ್ಯಾಪಕ ಪ್ರಚಾರ ನೀಡಿ ನಿಗಧಿತ ದಿನಾಂಕದೊಳಗೆ ಆಧ್ಯತೆಯನ್ನು ದಾಖಲಿಸಲು ತಿಳಿಸಲು ಸೂಕ್ತ ಕ್ರಮಕೈಗೊಳ್ಳತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ವರ್ಗಾವಣಾ ಕಾಯ್ದೆ ಮತ್ತು ನಿಯಮಗಳಲ್ಲಿನ ವಿನಾಯಿತಿ ನಿಡುವ ಆಧ್ಯತೆಯನ್ನು ಮೂಲ ಪ್ರಮಾಣ ಪತ್ರದೊಂದಿಗೆ ಪರಿಶೀಲಿಸಿ ಅರ್ಹ ಪ್ರಕರಣಗಳನ್ನು ಮಾತ್ರ ತಂತ್ರಾಂಶದಲ್ಲಿ ಅನುಮೋದಿಸುವುದು. ಶಿಕ್ಷಕರು ಕ್ಲೇಮ್ ಮಾಡಿರುವ ಆಧ್ಯತೆ ಹಾಗೂ ಸಲ್ಲಿಸಿರುವ ಪ್ರಮಾಣ ಪತ್ರವು ಅಂಗೀಕರಿಸಲು ಯೋಗ್ಯವಿಲ್ಲದ ಪ್ರಕರಣಗಳಲ್ಲಿ ತಿರಸ್ಕರಿಸಲು ಕಾರಣ ಸಹಿತ ವಿವರಣೆಯನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು.

ಹೆಚ್ಚುವರಿ ಎಂದು ಗುರುತಿಸಲ್ಪಟ್ಟಿದ್ದು ವಿನಾಯಿತಿ ಪಡೆದು ಅದೇ ಶಾಲೆಯಲ್ಲಿ ಮುಂದುವರೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರಗಳನ್ನು ನೀಡಿದ್ದು ಕಂಡುಬಂದಲ್ಲಿ ಅಂತಹಾ ಪ್ರಕರಣಗಳನ್ನು ಮತ್ತೊಮ್ಮೆ ಪರಿಶೀಲನೆಗೆ ಒಳಪಡಿಸಲಾಗುವುದು ತದನಂತರ ಪ್ರಮಾಣ ಪತ್ರವು ಸುಳ್ಳು ಎಂದು ಕಂಡುಬಂದಲ್ಲಿ ಅಂತಹಾ ಶಿಕ್ಷಕರಿಗೆ ನಿಡಿರುವ ವಿನಾಯಿತಿಯನ್ನು ರದ್ದುಪಡಿಸುವುದರ ಜೊತೆಯಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು(ಸಿ.ಸಿ.ಎ) ನಿಯಮ-1957ರಡಿಯಲ್ಲಿ ಶಿಸ್ತುಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದೆ.

**ಉಪನಿರ್ದೇಶಕರುಗಳಿಗೆ ಸೂಚನೆ: ರಾಜ್ಯದ ಎಲ್ಲಾ ಉಪನಿರ್ದೇಶಕರು ತಮ್ಮ ಜಿಲ್ಲೆಯಲ್ಲಿನ ಅಂಗವಿಕಲ/ವೈದ್ಯಕೀಯ ಪ್ರಕರಣದಡಿಯಲ್ಲಿ ವಿನಾಯಿತಿ/ಆಧ್ಯತೆ ಕೋರುವ ಶಿಕ್ಷಕರ ವೈದ್ಯಕೀಯ ತಪಾಸಣೆ ನಡೆಸಲು ಜಿಲ್ಲಾಮಟ್ಟದ ತ್ರಿಸದಸ್ಯ ವೈದ್ಯಕೀಯ ಮಂಡಳಿಯನ್ನು ರಚಿಸಿ ಹೃದಯ, ಲಿವರ್, ಕಿಡ್ನಿ ಮತ್ತು ಶ್ವಾಸಕೋಶಗಳ ಸಂಬಂಧಿಸಿದ ತೀವ್ರತರವಾದ ಖಾಯಿಲೆಯಿಂದ(Terminally ill) ಅಥವಾ ಕ್ಯಾನ್ಸರ್‌ನಂತಹ ತೀವ್ರತರವಾದ(Terminally ill) ಖಾಯಿಲೆಯಿಂದ ಬಳಲುತ್ತಿದ್ದು ಪ್ರಸ್ತುತ ಚಿಕಿತ್ಸೆ ಪಡೆಯುತ್ತಿರುವ ಹಾಗೂ ಸದರಿ ಚಿಕಿತ್ಸೆ ಆ ತಾಲ್ಲೂಕಿನಲ್ಲಿ ಲಭ್ಯವಿಲ್ಲದಿರುವ ಬಗ್ಗೆ, ಹಾಗೂ ಶೇ 40%ಕ್ಕಿಂತ ಹೆಚ್ಚಿನ ಅಂಗವೈಕಲ್ಯತೆ ಇರುವ ಬಗ್ಗೆ ಪರೀಕ್ಷಿಸಿ ವೈದ್ಯಕೀಯ ಪ್ರಮಾಣ ಪತ್ರದಲ್ಲಿ ಕಡ್ಡಾಯವಾಗಿ ಖಾಯಿಲೆಯ ಸ್ವರೂಪ/ತೀವ್ರತೆ, ಶಿಕ್ಷಕರ/ಅವಲಂಬಿತರ ಭಾವಚಿತ್ರ, ಕೆ.ಜಿ.ಐ.ಡಿ ಸಂಖ್ಯೆ, ಶಾಲೆಯ ವಿಳಾಸ ಶಿಕ್ಷಕರು ಹಾಗೂ ಅವಲಂಬಿತರಿಗಿರುವ ಸಂಬಂಧದ ವಿವರವನ್ನು ಸ್ಪಷ್ಟವಾಗಿ ತ್ರಿಸದಸ್ಯ ವೈದ್ಯಕೀಯ ಪ್ರಮಾಣ ಪತ್ರದಲ್ಲಿ ನಮೂದಿಸಿ ನೀಡಲು ಅನುವಾಗುವಂತೆ ತಮ್ಮ ಜಿಲ್ಲೆಯ ಜಿಲ್ಲಾ ಆಸ್ಪತ್ರೆಯ ಆಡಳಿತಾಧಿಕಾರಿಗಳಿಗೆ ಪತ್ರ ಬರೆದು ಕೋರಲು ತಿಳಿಸಿದೆ.**

ಈ ಪ್ರಕ್ರಿಯೆಯಲ್ಲಿ ಅರ್ಹತೆ ಇಲ್ಲದ ಶಿಕ್ಷಕರಿಗೆ ವಿನಾಯಿತಿ ನೀಡಿರುವುದು ಕಂಡುಬಂದಲ್ಲಿ ಅಂತಹಾ ಸಕ್ಷಮ ಪ್ರಾಧಿಕಾರದ ವಿರುದ್ದವೂ ಸಹಾ ನಿಯಮಾನುಸಾರ ಸೂಕ್ತ ಶಿಸ್ತು ಕ್ರಮಗಳನ್ನು ಕೈಗೊಳ್ಳಲಾಗುವುದು. ಆದ್ದರಿಂದ ಪ್ರಕ್ರಿಯೆಯಲ್ಲಿ ಯಾವುದೇ ಲೋಪವಾಗದಂತೆ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಲು ಸಕ್ಷಮ ಪ್ರಾಧಿಕಾರಿಗಳಿಗೆ ಸೂಚಿಸಿದೆ.

## ಹೆಚ್ಚುವರಿ ಶಿಕ್ಷಕರ ಮರುಹೊಂದಾಣಿಕಾ (Rationalization) ಪ್ರಕ್ರಿಯೆಯ ಕ್ರಮಗಳ ವರ್ಗಾವಣಾ ವೇಳಾಪಟ್ಟಿ

| ಕ್ರಸ | ವಿವರ<br>ವರ್ಗಾವಣೆ ವಿಧ | ವೃಂದ<br>ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ವೃಂದ | ಕ್ರಮ ವಹಿಸುವ ಅಧಿಕಾರಿಗಳು |
|---|---|---|---|
| ಅ | ವರ್ಗಾವಣಾ ತಂತ್ರಾಂಶದ ಮುಖಾಂತರ ಹೆಚ್ಚುವರಿ ಶಿಕ್ಷಕರ ಸಮರ್ಪಕ ಮರುಹಂಚಿಕೆಗೆ ವಿನಾಯಿತಿ ಕೋರುವ ಶಿಕ್ಷಕರಿಂದ (ಪ್ರೌಢಶಾಲಾ ಮುಖ್ಯಶಿಕ್ಷಕರಿಗೆ ಅನ್ವಯವಾಗುವುದಿಲ್ಲ) ಆದ್ಯತೆಗಳ ವಿನಾಯಿತಿ ಕೋರಿ ಅಗತ್ಯ ದಾಖಲೆಗಳನ್ನು ತಂತ್ರಾಂಶದಲ್ಲಿ ಸಲ್ಲಿಸಲು ಇರುವ ಕಾಲಾವಧಿ [ಆದ್ಯತೆ/ವಿನಾಯಿತಿ ಕೋರುವ ಪ್ರಕರಣಗಳಲ್ಲಿ ಅಗತ್ಯವಾದ ದಾಖಲೆಗಳನ್ನು ಸ್ಪಷ್ಟವಾಗಿ ಕಾಣುವ ರೀತಿಯಲ್ಲಿ ಅಪ್‌ಲೋಡ್ ಮಾಡದೇ ಇದ್ದಲ್ಲಿ ಅಂತಹ ಅರ್ಜಿಗಳನ್ನು ಕ್ಷೇತ್ರಶಿಕ್ಷಣಾಧಿಕಾರಿಗಳ ಹಂತದಲ್ಲಿಯೇ ತಿರಸ್ಕರಿಸಲು ಕ್ರಮವಹಿಸುವುದು] | 09/12/2022 ರಿಂದ 17/12/2022 | ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳು/ ಜಿಲ್ಲಾ ಉಪನಿರ್ದೇಶಕರು ಸಂಬಂಧಪಟ್ಟ ಶಿಕ್ಷಕರುಗಳು |
| ಆ | ಆದ್ಯತೆಯಲ್ಲಿನ ದಾಖಲೆಗಳ ಪರಿಶೀಲನೆ/ ಅಂಗೀಕಾರ/ ತಿರಸ್ಕಾರ | 13/12/2022 ರಿಂದ 19/12/2022 | ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳು/ ಜಿಲ್ಲಾ ಉಪನಿರ್ದೇಶಕರು |
| ಇ | ವಿನಾಯಿತಿ/ಆದ್ಯತೆ ಪಡೆಯುವವರ ಕರಡು ಅರ್ಹತಾ ಪಟ್ಟಿ ಕಾರಣಗಳೊಂದಿಗೆ ವಿನಾಯಿತಿ/ಆದ್ಯತೆ ಪಡೆಯಲು ಅನರ್ಹತೆ ಇರುವವರ ಕರಡು ಪಟ್ಟಿ | 20/12/2022 | ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳು/ ಜಿಲ್ಲಾ ಉಪನಿರ್ದೇಶಕರು |
| ಈ | ಕರಡು ಅರ್ಹ ಮತ್ತು ಅನರ್ಹ ಪಟ್ಟಿಯ ಆದೇಶದಿಂದ ಬಾಧಿತರಾದ ಶಿಕ್ಷಕರು 03 ಕೆಲಸದ ದಿನಗಳೊಳಗಾಗಿ ಕುಂದು ಕೊರತೆ ನಿವಾರಣಾ ಅಧಿಕಾರಿಯನ್ನು ಸಂಪರ್ಕಿಸಿ ಆಕ್ಷೇಪಣೆಯನ್ನು ಸಲ್ಲಿಸುವ ಅವಧಿ | 21/12/2022 ರಿಂದ 27/12/2022 | ವಿಭಾಗೀಯ ಸಹನಿರ್ದೇಶಕರುಗಳು<br>ಕ್ಷೇತ್ರಶಿಕ್ಷಣಾಧಿಕಾರಿಗಳು/ ಉಪನಿರ್ದೇಶಕರು/ |

**ಸೂಚನೆ: ಹೆಚ್ಚುವರಿ ಶಿಕ್ಷಕರ ಅಂತಿಮ ಆಧ್ಯಾತಾ ಪಟ್ಟಿ ಮತ್ತು ಕೌನ್ಸಿಲಿಂಗ್ ನಡೆಸುವ ದಿನಾಂಕವನ್ನು ಮುಂದಿನ ದಿನಗಳಲ್ಲಿ ಪ್ರಕಟಿಸಲಾಗುವುದು.**

09/12/2022

(ಡಾ॥ ವಿಶಾಲ್. ಆರ್) ಭಾ.ಆ.ಸೇ
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ.
ಬೆಂಗಳೂರು.

ಇವರಿಗೆ ಅಗತ್ಯ ಕ್ರಮಕ್ಕಾಗಿ;

1) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರು ರವರುಗಳಿಗೆ
2) ಜಂಟಿ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು
3) ನಿರ್ದೇಶಕರು(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
4) ಸಹ ನಿರ್ದೇಶಕರು, ಬೆಂಗಳೂರು/ಮೈಸೂರು/ಅಪರ ಆಯುಕ್ತರ ಕಛೇರಿ ಗುಲ್ಬರ್ಗಾ/ಧಾರವಾಡ
5) ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು/ಮೈಸೂರು /ಬೆಳಗಾವಿ/ಕಲಬುರಗಿ
6) ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ)
7) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಉಪನಿರ್ದೇಶಕರು[ಆಡಳಿತ] ರವರ ಮೂಲಕ)

ಪ್ರತಿಯನ್ನು:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1 ರವರ ಆದ್ಯ ಅವಗಾಹನೆಗಾಗಿ.
2. ಆಪ್ತ ಕಾರ್ಯದರ್ಶಿಯವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ .
3. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ /ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು.
4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ ಮಾಹಿತಿಗಾಗಿ ಕಳುಹಿಸಿದೆ.

5. ಜಂಟಿ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
6. ಆಪ್ತ ಕಾರ್ಯದರ್ಶಿಯವರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ
7. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರುಗಿ/ಧಾರವಾಡ
8. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರು ರವರುಗಳಿಗೆ.
9. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು ರವರಿಗೆ.
10. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು-01 ರವರಿಗೆ ಪ್ರತಿಯನ್ನು ರವಾನಿಸುತ್ತಾ, ಉದ್ದೇಶಿತ ವರ್ಗಾವಣೆ ಪ್ರಕ್ರಿಯೆಗೆ "ತಂತ್ರಾಂಶವನ್ನು" ನಿಯಮಗಳಡಿ ಸಜ್ಜುಗೊಳಿಸಿ ಯಾವುದೇ ಲೋಪಗಳು ಉದ್ಭವಿಸದಂತೆ, ಸೂಕ್ತ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.
11. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಅಭಿವೃದ್ದಿ) ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)
12. ರಾಜ್ಯದ ಎಲ್ಲಾ ತಾಲ್ಲೂಕ್ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ
13. ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆಗಳ ಸಭಾಪತಿ ಮತ್ತು ಆಡಳಿತಾಧಿಕಾರಿಗಳು ಇವರಿಗೆ ಕಳುಹಿಸುತ್ತಾ ಜಿಲ್ಲಾಹಂತದಲ್ಲಿ ತ್ರಿಸದಸ್ಯ ವೈದ್ಯಕೀಯ ಮಂಡಳಿ ರಚಿಸಿ ತಪಾಸಣೆಗೆ ಒಳಪಡುವ ಶಿಕ್ಷಕರನ್ನು ಪರೀಕ್ಷಿಸಿ ಮಾರಣಾಂತಿಕ ಕಾಯಿಲೆ ಇರುವ ಬಗ್ಗೆ ದೃಢೀಕರಿಸಿ ಪ್ರಮಾಣ ಪತ್ರ ನೀಡಲು ಕೋರಿದೆ. (ಉಪನಿರ್ದೇಶಕರ ಮೂಲಕ )
14. ಇಲಾಖಾ ವೆಬ್-ಸೈಟ್‌ನಲ್ಲಿ ಪ್ರಕಟಣೆಗಾಗಿ ಇ-ಆಡಳಿತ ಶಾಖೆಗೆ.
15. ಕಛೇರಿ ಪ್ರತಿ.